ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

### ಸಿ.ಸಿ.ನಂ.12/2023

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ರಂಗಪ್ಪ** | | |
| **ತಂದೆಃಹೆಸರು** | **ಹನುಮಪ್ಪ** | **ಪಿಡಬ್ಲ್ಯೂಃ** | **10** |
| **ವಯಸ್ಸು** | **66 ವರ್ಷ** | **ಸಿಡಬ್ಲ್ಯೂಃ** | **9** |
| **ಉದ್ಯೋಗಃ** | **ವ್ಯವಸಾಯ** | | |
| **ವಾಸ ಸ್ಥಳಃ** | **ಸಿಂಧನೂರು.** | | |

**ದಿನಾಂಕ 22-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ನನಗೆ ಚಾಸಾ-1, 2, 8, 11 ರಿಂದ 14 ರವರ ಪರಿಚಯ ಇಲ್ಲ. ಮೃತ ರವಿ ಸಹ ನನಗೆ ಗೊತ್ತಿಲ್ಲ. ಆರೋಪಿತರ ಪರಿಚಯ ಇಲ್ಲ.

ಸಾಕ್ಷಿಯು ಫೋಟೋದಲ್ಲಿರುವ ಬಂಡಿಯನ್ನು ನೋಡಿ ಗುರುತಿಸಿರುತ್ತಾರೆ. 3 ವರ್ಷಗಳ ಹಿಂದೆ ನಾನು ನನ್ನ ಬಂಡಿಯನ್ನು ತೆಗೆದುಕೊಂಡು ಹೊಲಕ್ಕೆ ಹೋಗುತ್ತಿದ್ದಾಗ, ಯಾವುದೋ ಒಂದು ವಾಹನ ನಮ್ಮ ಬಂಡಿಗೆ ಡಿಕ್ಕಿ ಹೊಡೆದು, ಅಪಘಾತವಾಗಿತ್ತು. ನನಗೆ ಎಚ್ಚರವಾದಾಗ ನಾನು ಆಸ್ಪತ್ರೆಯಲ್ಲಿದ್ದೆ. ಅಪಘಾತಪಡಿಸಿದ ವಾಹನ ಯಾವುದು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಫೋಟೋಗಳನ್ನು ನೋಡಿ ನನಗೆ ಏನೂ ಗೊತ್ತಿಲ್ಲ ಎನ್ನುತ್ತಾರೆ. ನನಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲ, ನಾನು ಪೋಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ**

ದಿ. 15-07-2022 ರಂದು ಸಿಂಧನೂರು-ರಾಯಚೂರು ಮುಖ್ಯ ರಸ್ತೆಯಲ್ಲಿ ಪಿಡಬ್ಲುಡಿ ಕ್ಯಾಂಪಿನ ನೋಬೆಲ್ ಕಾರ್ ಕೇರ್ ರಸ್ತೆಯಲ್ಲಿ ನಾನು ಮತ್ತು ಚಾಸಾ-1 ರವರು ನಿಂತಿದ್ದಾಗ, ನಾನು ಬಂಡಿ ಹೊಡೆದುಕೊಂಡು ಸಿಂಧನೂರು ಕಡೆಗೆ ಹೋಗುತ್ತಿದ್ದಾಗ ಆರೋಪಿ ತನ್ನ ವಾಹನವನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ನಡೆಸಿಕೊಂಡು ಬಂದು ಡಿಕ್ಕಿ ಪಡಿಸಿದ್ದರಿಂದ, ಅವರಿಗೆ ತೀವ್ರ ತರವಾದ ರಕ್ತಗಾಯವಾಗಿತ್ತು ಎಂದರೆ ಸರಿಯಲ್ಲ. ಲಾರಿಯಲ್ಲಿದ್ದ ಒಬ್ಬ ವ್ಯಕ್ತಿ ಮೃತಪಟ್ಟಿದ್ದ, ಚಾಲಕನನ್ನು ಹೊರಗೆ ತೆಗೆದಿದ್ದು, ಅವರಿಗೆ ಉಪಚರಿಸಿದ್ದಿರಿ ಎಂದರೆ ಸರಿಯಲ್ಲ. ಮೃತಪಟ್ಟರವರ ಹೆಸರು ರವಿ ಎಂದು ತಿಳಿದಿತ್ತು ಎಂದರೆ ಸರಿಯಲ್ಲ. ಆತನಿಗೆ ತೀವ್ರ ತರವಾದ ರಕ್ತಗಾಯಗಳಾಗಿದ್ದವು ಎಂದರೆ ಸರಿಯಲ್ಲ. ಲಾರಿ ಚಾಲಕ & ಕ್ಲೀನರ್ ಗೆ ವಿಚಾರಿಸಿದಾಗ ಚಾಲಕನ ಹೆಸರು ಇಮ್ರಾನ್ ಸಾಹೆಬ್ ಎಂದು, ಕ್ಲೀನರ್ ಹೆಸರು ನೂರುಲ್ಲಾ ಎಂದು ತಿಳಿದಿತ್ತು ಎಂದರೆ ಸರಿಯಲ್ಲ. 2 ನೇ ಆರೋಪಿ & ನೂರುಲ್ಲಾರವರಿಗೆ ತೀವ್ರ ತರವಾದ ರಕ್ತಗಾಯಗಳಾಗಿದ್ದವು ಎಂದರೆ ಸರಿಯಲ್ಲ. ರಾಯಚೂರು ರಸ್ತೆ ಕಡೆಯಿಂದ ತನ್ನ ವಾಹನ ಸಂ.ಕೆ ಎ 23/ಎ-4348 ರಲ್ಲಿ ಸಿಮೆಂಟ್ ಚೀಲಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು ಎಂದರೆ ಸರಿಯಲ್ಲ. 2 ನೇ ಆರೋಪಿಯ ಲಾರಿ ಸಂ. ಕೆ ಎ 14/ಬಿ-3809 ಆಗಿತ್ತು ಎಂದರೆ ಸರಿಯಲ್ಲ. ಆಯಿಲ್ ಬ್ಯಾರೆಲ್‌ಗಳು ಕೆಳಗೆ ಬಿದ್ದಿದ್ದವು ಎಂದರೆ ಸರಿಯಲ್ಲ. ಸದರಿ ಅಪಘಾತಕ್ಕೆ ಆರೋಪಿತರೇ ಕಾರಣ ಎಂದರೆ ಸರಿಯಲ್ಲ.

ಸದರಿ ವಿಚಾರವಾಗಿ ನಾನು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದಿರುವುದರಿಂದ, ಸಾಕ್ಷಿಯು ಪೋಲೀಸರಿಗೆ ನೀಡಿದ ಹೇಳಿಕೆಯನ್ನು ನಿಪಿ-37 ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲ.**

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ., ಸಿಂಧನೂರು.**